# ಕೌದಿ ಎಂಬ ಕುಟುಂಬದ ಕಥಾಸಂಕಲನ

ಚಳಿಯಲ್ಲಿ ಬೆಚ್ಚನೆ ಹಾಗೂ ಬೇಸಿಗೆಯಲ್ಲಿ ತಂಪಿನ ಅನುಭವ ನೀಡುವ ಕೌದಿ, ಅಮ್ಮನ ಮಡಿಲಿನಂತಹುದು. ಹೆಣ್ಣುಮಕ್ಕಳ 'ಕೌದಿ ಕಲೆ' ಭಾರತದ ಬಹುತ್ವದ ಸಂಕೇತವೂ ಹೌದು. ಹಲವು ಹೆಣ್ಣುಮಕ್ಕಳು ಕೈಜೋಡಿಸಿದಾಗ, ಹಲವು ಬಣ್ಣಗಳ ಚೂರು ಚೂರು ಬಟ್ಟೆಗಳು ಕೌದಿಯಾಗಿ ರೂಪುಗೊಳ್ಳುತ್ತವೆ. ಕೌದಿ ಹೊಲಿಯುವವರ ಪ್ರೀತಿ–ಕಾಳಜಿಯೇ ನೂಲಿನ ರೂಪದಲ್ಲಿ ಬಟ್ಟೆ ಚೂರುಗಳನ್ನು ಕೂಡಿಸಿ ಕೌದಿಯಾಗಿಸುತ್ತದೆ. ಕೌದಿ ಎನ್ನುವ ಕಲಾಕೃತಿ ಗ್ರಾಮೀಣ ಹೆಣ್ಣುಮಕ್ಕಳ ಕಲಾಭಿವ್ಯಕ್ತಿಗೆ ಕ್ಯಾನ್ವಾಸ್ ಕೂಡ ಆಗುತ್ತದೆ. ಆಧುನಿಕತೆಯ ಭರಾಟೆ–ಪ್ರಭಾವಳಿಯಲ್ಲಿ ಕೌದಿ ಹಿನ್ನೆಲೆಗೆ ಸರಿಯುತ್ತಿರುವಂತಿದೆ. ಈ ಕೌದಿ ಕಲೆಯನ್ನು ಉಳಿಸಿಕೊಳ್ಳುವುದು, ಹೆಣ್ಣುಮಕ್ಕಳ ಕರಕುಶಲ ಕಲೆಯೊಂದನ್ನು ಉಳಿಸಿಕೊಳ್ಳುವ ದಾರಿ ಆಗಿರುವಂತೆಯೇ, ಕಾಳಜಿ–ವಾತ್ಸಲ್ಯದ ಮಾತೃ ಪರಂಪರೆಯ ಮಾದರಿಯೊಂದನ್ನು ಜತನವಾಗಿಸುವ ದಾರಿಯೂ ಹೌದು.

■ ವಸುಧೇಂದ್ರ

